ಚೈತ್ರಾ ಅವರ ಮಡಿಲಿಗೆ ಬಂದು ಬೀಳುತ್ತಲೇ ಇವೆ. ಆದರೆ ಬಂದ ಅವಕಾಶಗಳನ್ನೆಲ್ಲ ಕಣ್ಣುಮುಚ್ಚಿಕೊಂಡು ಒಪ್ಪಿಕೊಳ್ಳುವ ಜಾಯಮಾನದವರಲ್ಲ ಅವರು.

'ನಾನು ಸ್ವಲ್ಪ ಚ್ಯೂಸಿ. ಗ್ಲ್ಯಾಮರಸ್, ಕಂಟೆಂಟ್ ಓರಿಯೆಂಟೆಡ್ ಪಾತ್ರಗಳಲ್ಲಿಯೂ ನಟಿಸುತ್ತೇನೆ. ಭಿಕ್ಷುಕಿ ಪಾತ್ರವನ್ನೂ ಮಾಡಬಲ್ಲೆ. ಆದರೆ ಪ್ರಾಪರ್ಟಿ ರೀತಿಯ ಪಾತ್ರಗಳಲ್ಲಿ ಕಾಣಿಸಿಕೊಳ್ಳಲು ಇಷ್ಟವಿಲ್ಲ. ಯಾವುದೋ ಒಂದು ಪಾತ್ರ ಇಲ್ಲದೇ ಹೋದರೂ ಸಿನಿಮಾಗೆ ನಷ್ಟವಿಲ್ಲ ಎಂದರೆ ಅಂಥ ಪಾತ್ರ ಇರಲೇಬಾರದು. ನಾನೂ ಅಂಥ ಪಾತ್ರಗಳಲ್ಲಿ ನಟಿಸಲಾರೆ. ಐದೇ ನಿಮಿಷ ಪರದೆಯ ಮೇಲೆ ಕಾಣಿಸಿಕೊಳ್ಳಲಿ, ಆ ಪಾತ್ರ ಇಡೀ ಕಥೆಯ ಅವಿಭಾಜ್ಯ ಅಂಗವಾಗಿರಬೇಕು' ಎನ್ನುವುದು ಅವರ ನಿಲುವು.

ಅವರ ಅಭಿರುಚಿಗೆ ಹೊಂದುವಂಥದ್ದೇ ಪಾತ್ರವನ್ನು ಇದೀಗ ನಿರ್ದೇಶಕ ನಾಗರಾಜ ಸೋಮಯಾಜಿ ಕೊಟ್ಟಿದ್ದಾರೆ. ಅವರ ನಿರ್ದೇಶನದ ಮೊದಲ ಸಿನಿಮಾ 'ಅಕಟಕಟ'ದ ನಾಯಕಿಯಾಗಿ ಚೈತ್ರಾ ನಟಿಸುತ್ತಿದ್ದಾರೆ.

'ಜಾನಕಿ ಎಂಬುದು ನನ್ನ ಪಾತ್ರದ ಹೆಸರು. ನನಗೆ ನಾಗರಾಜ್ ಅವರ ಮೊದಲಿನ ಕೆಲಸಗಳನ್ನು ನೋಡಿ ವಾವ್ ಅನಿಸಿತು. ನಟಿಸಲು ಒಪ್ಪಿಕೊಂಡೆ. ಅದೊಂದು ಕೆಳಮಧ್ಯವರ್ಗದ ಹುಡುಗಿ. ಎಲ್ಲ ಸಂಕಷ್ಟಗಳ ನಡುವೆಯೂ ಶಿಕ್ಷಣಕ್ಕಾಗಿ ಹಂಬಲಿಸುವ, ಛಲಹಿಡಿದು ಶಿಕ್ಷಣ ಪಡೆದುಕೊಳ್ಳುವ ಹುಡುಗಿ' ಎಂದು ಪಾತ್ರದ ಬಗ್ಗೆ ಅವರು ಹೇಳಿಕೊಳ್ಳುತ್ತಾರೆ.

ಚೈತ್ರಾ ಅವರ ಪ್ರಕಾರ ಒಳ್ಳೆಯ ನಟನೆ ಎಂದರೆ ಒಳ್ಳೆಯ ಅನುಕರಣೆ. 'ನಟನೆ ಎಂಬುದು ಹೊಸದೇನನ್ನೋ ಸೃಷ್ಟಿಸುವ ಕೆಲಸ ಅಲ್ಲ. ಬದಲಿಗೆ ಇರುವುದನ್ನು ಅನ್ವೇಷಿಸುವ ಕೆಲಸ. ಒಳ್ಳೆಯ ನಟರು ನಿಮ್ಮನ್ನೇ ಗಮನಿಸಿ, ನಿಮಗಿಂತ ಚೆನ್ನಾಗಿ ನಿಮ್ಮನ್ನು ಅನುಕರಿಸಿಬಿಡುತ್ತಾರೆ. ನನ್ನ ದೃಷ್ಟಿಯಲ್ಲಿ ಅದೇ ನಟನೆ' ಎನ್ನುವ ಅವರಿಗೆ ನಟನೆಯ ಜೊತೆಗೆ ಗಾಯನದ ವ್ಯಾಮೋಹವೂ ಇದೆ.

ಈಗಾಗಲೇ ಅವರು 'ಗರುಡ ಗಮನ ವೃಷಭ ವಾಹನ' ಸಿನಿಮಾಗೆ ಹಾಡಿದ್ದಾರೆ. ಅವರ ಕಂಠಸಿರಿ ಇನ್ನೂ ಎರಡು ಸಿನಿಮಾಗಳ ಭಾಗವಾಗಿದೆ. ನಟನೆಯ ಜೊತೆಗೆ ಹಿನ್ನೆಲೆ ಗಾಯನವನ್ನೂ ಮುಂದುವರಿಸಿಕೊಂಡು ಹೋಗುವ ಇರಾದೆ ಅವರಿಗಿದೆ.

ಛಾಯಾಗ್ರಹಣದ ಬಗ್ಗೆಯೂ ಚೈತ್ರಾಗೆ ವಿಶೇಷ ಆಸಕ್ತಿ. 'ನಿರ್ದೇಶನವನ್ನೆಲ್ಲ ಮಾಡುತ್ತೇನೆಂದು ಅನಿಸುವುದಿಲ್ಲ. ಆದರೆ ಕ್ಯಾಮೆರಾ ಬಗ್ಗೆ ನನಗೆ ವಿಶೇಷ ಕುತೂಹಲವಿದೆ. ಅದರ ಬಗ್ಗೆ ಇನ್ನಷ್ಟು ತಿಳಿದುಕೊಳ್ಳುವ ಹಂಬಲ ಇದೆ. ಹಾಗಾಗಿ ಮುಂದೊಂದು ದಿನ ನಟನೆಯ ಹೊರತಾಗಿ ಏನಾದರೂ ಮಾಡುವುದಾದರೆ ಛಾಯಾಗ್ರಹಣ ಮಾಡಬಹುದೇನೋ' ಎಂದು ನಗುವ ಚೈತ್ರಾ ಸದ್ಯಕ್ಕಂತೂ ಕಣ್ಣೆದುರಿಗೆ ಹರಡಿಕೊಂಡಿರುವ ಅವಕಾಶಗಳ ಆಕಾಶದಲ್ಲಿ ಒಂದೊಂದೇ ಚುಕ್ಕಿಗಳನ್ನು ಹೆಕ್ಕುವುದರಲ್ಲಿ ತನ್ಮಯರಾಗಿದ್ದಾರೆ. ■



# ಒಳ್ಳೆಯ ಕಥೆಗಳ ಭಾಗವಾಗುವೆ

'ಗೋಧಿ ಬಣ್ಣ ಸಾಧಾರಣ ಮೈಕಟ್ಟು', 'ಹಂಬಲ್ ಪೊಲಿಟಿಷಿಯನ್ ನೋಗ್ರಾಜ್' ಸಿನಿಮಾಗಳಿಗೆ ಹಣ ಹೂಡಿದ್ದ ಹೇಮಂತ್ ಮತ್ತೆ ನಿರ್ಮಾಣದ ಕೆಲಸಕ್ಕೆ ಇಳಿದಿದ್ದಾರೆ. ಈ ಸಲ ಅವರು ಸ್ವತಂತ್ರ ನಿರ್ಮಾಪಕರಾಗುತ್ತಿದ್ದಾರೆ. 'ಗುಳ್ಟು' ಸಿನಿಮಾದ ಮೂಲಕ ಗಮನಸೆಳೆದಿದ್ದ ಜನಾರ್ದನ್ ಚಿಕ್ಕಣ್ಣ ಅವರ ನಿರ್ದೇಶನದ ಸಿನಿಮಾವನ್ನು ಹೇಮಂತ್ ನಿರ್ಮಾಣ ಮಾಡುತ್ತಿದ್ದಾರೆ.

ಇದೊಂದು ಮರ್ಡರ್ ಮಿಸ್ಟರಿ ಕಥೆಯಂತೆ. 90ರ ದಶಕದಲ್ಲಿ ಚಿಕ್ಕಮಗಳೂರಿನಲ್ಲಿ ನಡೆಯುವ ಈ ಕಥೆಯಲ್ಲಿ ರಂಗಾಯಣ ರಘು ಮುಖ್ಯಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಪಾವನಾ ಕೂಡ ಇನ್ನೊಂದು ಮುಖ್ಯ ಪಾತ್ರದಲ್ಲಿ ನಟಿಸುತ್ತಿದ್ದಾರೆ. ಸಿದ್ಧಾರ್ಥ ಮೂಲಿಮನಿ ಎಂಬ ಹೊಸ ಪ್ರತಿಭೆಯೂ ಈ ಸಿನಿಮಾದಲ್ಲಿದ್ದಾರೆ.

'ಇದು ಹೀರೊ, ಹೀರೊಯಿನ್ ಆಧಾರಿತ ಸಿನಿಮಾ ಅಲ್ಲ. ತುಂಬ ಗಟ್ಟಿಯಾದ ಕಥೆಯನ್ನಿಟ್ಟುಕೊಂಡು, ಅದನ್ನೇ ನೆಚ್ಚಿಕೊಂಡು ಮಾಡುತ್ತಿರುವ ಸಿನಿಮಾ. ನನಗೆ ಜನಾರ್ದನ್ ಚಿಕ್ಕಣ್ಣ ಮೊದಲಿನಿಂದಲೂ ಪರಿಚಯ. 'ಗುಳ್ಟು'ವಿನಂಥ ಒಳ್ಳೆಯ ಸಿನಿಮಾಗಳನ್ನು ಕೊಟ್ಟರೂ ನಂತರ ಅವರಿಗೆ ಸಿನಿಮಾ ಮಾಡಲು ಸಾಧ್ಯವಾಗಿರಲಿಲ್ಲ. ಒಳ್ಳೆಯ ನಿರ್ದೇಶಕ ಎಂದು ಸಾಬೀತುಪಡಿಸಿದ ಮೇಲೂ ಮುಂದಿನ ಸಿನಿಮಾಗೆ ತಡವರಿಸುವ ಪರಿಸ್ಥಿತಿ ಇರಬಾರದು. ನನಗೆ ಅವರ ಮೇಲೆ ನಂಬಿಕೆ ಇದೆ. ಅವರು ಸಿದ್ಧಮಾಡಿಕೊಂಡಿರುವ ಕಥೆಯೂ ತುಂಬ ಇಷ್ಟವಾಗಿದೆ. ನಾನು ಇದುವರೆಗೆ ಹಣ ಹೂಡಿದ ಯಾವ ಸಿನಿಮಾವೂ ನಷ್ಟ ಅನುಭವಿಸಿಲ್ಲ. ಈ ರೀತಿಯ ಸಿನಿಮಾಗಳಿಗೆ ಪ್ರೇಕ್ಷಕರು ಇದ್ದಾರೆ ಎಂದು ಕನ್ನಡಿಗರೇ ತೋರಿಸಿಕೊಟ್ಟಿದ್ದಾರೆ. ಹಾಗಾಗಿ ಅವರನ್ನೇ ನಂಬಿಕೊಂಡು ಈ ಸಿನಿಮಾ ಮಾಡುತ್ತಿದ್ದೇವೆ' ಎನ್ನುತ್ತಾರೆ ಹೇಮಂತ್.

ಅದ್ವೈತ ಗುರುಮೂರ್ತಿ ಅವರ ಛಾಯಾಗ್ರಹಣ, ಚರಣ್‌ರಾಜ್ ಸಂಗೀತ, ಉಲ್ಲಾಸ್ ಅವರ ಕಲಾ ನಿರ್ದೇಶನ ಈ ಸಿನಿಮಾಗಿದೆ.

'ಒಳ್ಳೆಯ ಕಲಾವಿದರ ತಂಡ ಮತ್ತು ಅಷ್ಟೇ ಒಳ್ಳೆಯ ತಾಂತ್ರಿಕ ತಂಡ ಇಟ್ಟುಕೊಂಡು ಸಿನಿಮಾ ಶುರುಮಾಡುತ್ತಿದ್ದೇವೆ. ಇದರ ಫಲವೂ ಅಷ್ಟೇ ಒಳ್ಳೆಯದಾಗಿರುತ್ತದೆ ಎಂಬ ನಂಬಿಕೆ ಇದೆ' ಎಂದು ವಿಶ್ವಾಸದಿಂದ ಹೇಳುತ್ತಾರೆ ಹೇಮಂತ್.

ಇದೇ ತಿಂಗಳ 20ರಂದು ಚಿತ್ರೀಕರಣ ಪ್ರಾರಂಭಿಸಲು ಚಿತ್ರತಂಡ ಸಿದ್ಧತೆ ಮಾಡಿಕೊಂಡಿದೆ. ಎರಡು ಶೆಡ್ಯೂಲ್‌ನಲ್ಲಿ ಚಿತ್ರೀಕರಣ ಮುಗಿಸಲು ಯೋಜನೆ ಹಾಕಿಕೊಳ್ಳಲಾಗಿದೆ.

'ನಾನು ಚಿತ್ರರಂಗಕ್ಕೆ ಬಂದಿದ್ದು ಒಳ್ಳೆಯ ಕಥೆಗಳ ಭಾಗವಾಗಬೇಕು ಎಂಬ ಉದ್ದೇಶದಿಂದ. ಅದು ನಿರ್ದೇಶಕನಾಗಿಯೇ ಇರಬೇಕು ಎಂದೇನಲ್ಲ. ನಿರ್ಮಾಣ, ಕಥೆಗಾರ, ನಿರ್ದೇಶನ ಹೀಗೆ ಯಾವುದೇ ರೀತಿಯಲ್ಲಾದರೂ ಒಳ್ಳೆಯ ಕಥೆಯ ಭಾಗವಾಗಬೇಕು ಎಂಬುದೇ ನನ್ನ ಆಸೆ. ಅದೇ ಉದ್ದೇಶದಿಂದ ನಮ್ಮ ನಿರ್ಮಾಣ ಸಂಸ್ಥೆಯಿಂದ ಇನ್ನಷ್ಟು ಒಳ್ಳೆಯ ಕಥೆಗಳನ್ನು ಖಂಡಿತ ನಿರ್ಮಾಣ ಮಾಡುತ್ತೇವೆ. ಸಂಖ್ಯೆಯಲ್ಲಿ ಹೆಚ್ಚು ಸಿನಿಮಾಗಳನ್ನು ನಿರ್ಮಾಣ ಮಾಡುವುದಕ್ಕಿಂತ ಗುಣಮಟ್ಟದಲ್ಲಿ ಉನ್ನತ ಸಿನಿಮಾಗಳನ್ನು ಮಾಡಬೇಕು ಎಂಬುದು ನಮ್ಮ ಉದ್ದೇಶ' ಎನ್ನುವ ಹೇಮಂತ್ ಸಿನಿಮಾ ನಿರ್ಮಾಣದ ದಾರಿಯಲ್ಲಿ ಇನ್ನಷ್ಟು ಮುಂದಕ್ಕೆ ನಡೆಯುವ ಸೂಚನೆಯನ್ನು ನೀಡುತ್ತಾರೆ. ■



ಜನಾರ್ದನ್ ಚಿಕ್ಕಣ್ಣ